3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

ಸಿ.ಸಿ. ಸಂಖ್ಯೆ: **1104/2019**

ಫಿರ್ಯಾದುದಾರರು:- ಎಂ.ಎಸ್. ಆರಾಧ್ಯ ಬಿನ್ ಎಂ. ಸಿದ್ದರಾಧ್ಯ , **62** ವರ್ಷ, ನಿವೃತ್ತಿ ಗ್ರಾಮ ಲೆಕ್ಕಿಗ, ಹಳೇಪೇಟೆ ವಾಸ, ಬೀರೂರು ಪಟ್ಟಣ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

- ವಿರುದ್ಧ -

ಆರೋಪಿತ:- ರವಿಕುಮಾರ್ ಬಿನ್ ವುಲ್ಲಿಗೆಣ್ಣ , **45** ವರ್ಷ, ವ್ಯಾಪಾರ, ವಾಸ ಮರ್ಗದ ಕ್ಯಾಂಪ್, ಅಶೋಕ ನಗರ, ಬೀರೂರು ಪಟ್ಟಣ , ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಆರೋಪಣೆ

ಫಿರ್ಯಾದುದಾರರು ಮತ್ತು ನೀವು ಪರಿಚಿತರಿದ್ದು, ಆರೋಪಿಯಾದ ನೀವು ನಿಮ್ಮ ಕುಟುಂಬದ ಅವಶ್ಯಕತೆಗಾಗಿ ಫಿರ್ಯಾದುದಾರರಿಂದ ರೂ.4,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು 18-03-2019 ರ ದಿನಾಂಕ ನಮೂದು ಮಾಡಿದ ಕರ್ನಾಟಕ ಬ್ಯಾಂಕ್ ಲಿ. ಬೀರೂರು ಶಾಖೆಯ ಚೆಕ್ ಸಂಖ್ಯೆ 736171 ನ್ನು ರೂ.4,00,000/-ಗಳಿಗೆ ಕೊಟ್ಟಿದ್ದು, ಫಿರ್ಯಾದುದಾರರು ಸದರಿ ಚೆಕ್ಕನ್ನು ಕರ್ನಾಟಕ ಬ್ಯಾಂಕ್ ಲಿ. ಬೀರೂರು ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನೀವು ನಿಮ್ಮ ಖಾತೆಯನ್ನು ಮುಚ್ಚಿರುವುದಾಗಿ ಸದರಿ ಚೆಕ್ಕು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸ್ಸಾಗಿದ್ದು ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 28-03-2019 ರಂದು ನೋಟೀಸನ್ನು

ಜಾರಿಗೊಳಿಸಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ಉದ್ದೇಶಪೂರ್ವಕವಾಗಿ ತೆಗೆದುಕೊಳ್ಳದೆ ನಿರಾಕರಿಸಿದ್ದು ಸದರಿ ನೋಟೀಸು ಜಾರಿಯಾಗದೇ ವಾಪಸ್ಸಾಗಿರುತ್ತದೆ. ನೋಟೀಸು ನೀಡಿದ ನಂತರವು ನೀವು ಚೆಕ್ಕಿನ ಹಣವನ್ನು ಪಾವತಿಸಿರುವುದಿಲ್ಲ ಮತ್ತು ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿರುತ್ತೀರಿ. ಆದ್ದರಿಂದ ನೀವು ನೆಗೋಷಿಯೆಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

1) ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ ತಿಳಿಯಿತು.

2) ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ ತಪ್ಪು ಮಾಡಿಲ್ಲ. ವಿಚಾರಣೆಯಾಗಲಿ.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 19.02.2020 ಸಹಿ/-

(ದೀಪು ಎಂ. ಟಿ.)
3 ನೇ ಹೆಚ್ಚುವರಿ ಮತ್ತು ಪ್ರದನ್ಯಾದಂ.,
ಕಡೂರು.